ANNEXURE–B

Cotton purchased by C. C. I. at different APMC's in the Karnataka for the year 1990-91 upto November 1990.

Sl. No.	Name of the Market	Quantity Purchased	Average price
1.	Kottur	1761	938
2.	Bailahongal	2700	970
3.	Dharwad	860	975
4.	Soundathi	4100	954
5.	Davangere	750	958
6.	Chitradurga	1500	943
7.	Ranebennur	1540	1162
8.	Gadag	312	975
9.	Bellary	6985	1049
10.	Sindhanur	1269	915
11.	Raichur	466	NA
		22,243	

ವಿಷಯ : ಕಬ್ಬನ್ ಪಾರ್ಕ ಅಭಿವೃದ್ಧಿಗೆ ಕ್ರಮ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೫೯೯(ಅಳಿ)

ಶ್ರೀ ವಾಟಾಳ ನಾಗರಾಜ್ (ಚಾಮರಾಜನಗರ) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರದ ಕಬ್ಬನ್ ವನದ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಆ) ರಾಜ್ಯದಲ್ಲಿರುವ ಸರ್ಕಾರಿ ಉದ್ಯಾನವನಗಳ ಸಂಖ್ಯೆ ಎಷ್ಟು ಹಾಗೂ ಅವು ಯಾವುವು ?

ಶ್ರೀ ಜ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :

ಅ) ಕಬ್ಬನ್ ಉದ್ಯಾನವನದ ಸುಧಾರಣೆ ಮತ್ತು ನಿರ್ವಹಣೆ ಬಗ್ಗೆ ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರ ಅಧ್ಯಕ್ಷತೆಯಲ್ಲಿ ಒಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದೆ.

(೧) ಸದರಿ ಸಮಿತಿಯ ಸಲಹೆ ಮೇರೆಗೆ ಉದ್ಯಾನವನಕ್ಕೆ ಸಾಕಷ್ಟು ನೀರು ಪೂರೈಸುವುದಕ್ಕಾಗಿ ೧೪ ಬೋರ್‌ವೆಲ್‌ಗಳನ್ನು ಕೊರೆಯಲು ಸ್ಥಳ ಗುರುತಿಸಿದ್ದು, ಈಗಾಗಲೇ ಕೊರೆದಿರುವ ಎರಡು ಬೋರ್‌ವೆಲ್‌ಗಳು ವಿಫಲವಾಗಿವೆ. ಉದ್ಯಾನವನದ ತಗ್ಗು ಪ್ರದೇಶಗಳಲ್ಲಿ ಬಾವಿಗಳನ್ನು ತೆಗೆದು ನೀರು ಪೂರೈಸಿಕೊಳ್ಳಲು ನಿರ್ಧರಿಸಲಾಗಿದೆ.

(೨) ಕಬ್ಬನ್ ಉದ್ಯಾನವನದ ರಸ್ತೆಗಳಲ್ಲಿ ವಾಹನ ಸಂಚಾರ ಹೆಚ್ಚಾಗಿದ್ದು ಉದ್ಯಾನವನದ ಪರಿಸರ ಕೆಡುತ್ತಿರುವ ಕಾರಣ ಇದನ್ನು ನಿಯಂತ್ರಿಸಲು ಹುಲ್ಲು ಹಾಸಿನ ಮೇಲೆ ವಾಹನ ನಿಲ್ಲಿಸುವವರ ಮೇಲೆ ಕೇಸು ಬುಕ್ ಮಾಡಿ ದಂಡವನ್ನು ವಿಧಿಸುವ ಬಗ್ಗೆ ಪೊಲೀಸ್ ಕಮೀಷನರ್‌ರವರು ಕಾರ್ಯೋನ್ಮುಖರಾಗಬೇಕೆಂದು ತಿಳಿಸಲಾಗಿದೆ. ಅದರಂತೆ ಈಗಾಗಲೇ ಕ್ರಮ ತೆಗೆದುಕೊಳ್ಳಲಾಗುತ್ತಿದೆ

(೩) ಕಬ್ಬನ ಉದ್ಯಾನವನದಲ್ಲಿ ಸಾರ್ವಜನಿಕರಿಗೆ ಹಾಗೂ ಪ್ರವಾಸಿಗರಿಗೆ ಹೆಚ್ಚಿನ ಶೌಚಾಲಯಗಳ ಮತ್ತು ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಲೋಕೋಪಯೋಗಿ ಇಲಾಖೆಯ ೩-೦೦ ಲಕ್ಷ ರೂ. ಗಳ ಅಂದಾಜಿನ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

(೪) ಕಬ್ಬನ್ ಉದ್ಯಾನವನದ ಸಸ್ಯ ಕ್ಷೇತ್ರದಲ್ಲಿ ಹೆಚ್ಚಿನ ಸಸಿ/ಗಿಡಗಳನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಎರಡು ಪ್ಲಾಸ್ಟಿಕ್ ಹಾಳೆಯ ಮನೆಗಳನ್ನು (ಪಾಲಿ ಹೌಸ್) ನಿರ್ಮಿಸಲಾಗಿದೆ. ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗಿಡಗಳನ್ನು ಬೆಳೆಸಲಾಗುತ್ತಿದೆ.

(೫) ಕಬ್ಬನ್ ಉದ್ಯಾನವನದ ವಾದ್ಯರಂಗದ ಆವರಣದ ಹುಲ್ಲುಹಾಸುಗಳು ಹಾಳಾಗಿರುವುದರಿಂದ ಅವುಗಳನ್ನು ಆಳವಾಗಿ ಅಗೆದು ಹೊಸ ಹುಲ್ಲು ಹಾಸುಗಳನ್ನು ಅಭಿವೃದ್ಧಿ ಮಾಡಲಾಗುತ್ತಿದೆ. ಕಬ್ಬನ್ ಉದ್ಯಾನವನದ ಮಧ್ಯಭಾಗದಲ್ಲಿ ಹಲವು ವರ್ಷಗಳಿಂದ ಕೆಟ್ಟು ನಿಂತು ಹೋಗಿದ್ದ ನೀರಿನ ಚಿಲುಮೆ (ಫೌಂಟನ್) ಯನ್ನು ಪೂರ್ತಿ ರಿಪೇರಿ ಮಾಡಿಸಿ ಈಗ ಕೆಲಸ ಮಾಡುತ್ತಿದೆ.

(೬) ಉದ್ಯಾನವನದ ನರ್ಸರಿಯಲ್ಲಿನ ಎರಡು ಹಳೆಯ ತೊಟ್ಟಿಗಳನ್ನು ದುರಸ್ತಿ ಮಾಡಿಸಿ ಅವುಗಳಲ್ಲಿ ನೀರು ಶೇಖರಿಸಿ ಹೆಚ್ಚಿನ ಸಸಿ/ಗಿಡಗಳನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ.

೪) ರಾಜ್ಯದಲ್ಲಿ ತೋಟಗಾರಿಕೆ ಇಲಾಖಾ ವತಿಯಿಂದ ಅಭಿವೃದ್ಧಿ ಪಡಿಸಿ ನಿರ್ವಹಣೆ ಮಾಡುತ್ತಿರುವ ಉದ್ಯಾನವನಗಳ ಸಂಖ್ಯೆ ೬೦. ಅವುಗಳು ಈ ಕೆಳಕಂಡಂತಿವೆ.

ಬೆಂಗಳೂರು ನಗರ :

೧) ಲಾಲ್‌ಬಾಗ್
೨) ಕಬ್ಬನ್ ಉದ್ಯಾನವನ

೩) ವಿಧಾನಸೌಧ ಉದ್ಯಾನವನ
೪) ಸೌರವ್ಯೂಹ ಭವನದ ಉದ್ಯಾನವನ
೫) ಎಂ. ಎನ್. ಕೃಷ್ಣರಾವ ಪಾರ್ಕ್
೬) ಲೋಕಸೇವಾ ಆಯೋಗದ ಆವರಣ ಹಾಗೂ ಶಾಸಕರ ಭವನದ ಉದ್ಯಾನವನ
೭) ರಾಜಭವನ ಉದ್ಯಾನವನ
೮) ಮಾನ್ಯ ಮಂತ್ರಿಗಳ ಮನೆಗಳ ಕೈತೋಟಗಳು ಹಾಗೂ ಉದ್ಯಾನವನಗಳು.
೯) ಗಣ್ಯವ್ಯಕ್ತಿಗಳ ಮನೆಗಳ ಕೈತೋಟಗಳು ಹಾಗೂ ಉದ್ಯಾನವನಗಳು

ಸರ್ಕಾರಿ ಆಸ್ಪತ್ರೆ ಉದ್ಯಾನವನಗಳು

೧೦) ವಿಕ್ಟೋರಿಯಾ ಆಸ್ಪತ್ರೆ ಉದ್ಯಾನವನ
೧೧) ವಾಣಿ ವಿಲಾಸ ಆಸ್ಪತ್ರೆ ಉದ್ಯಾನವನ
೧೨) ಹೆಚ್ ಎಸ್ ಸಿ. ಎಸ್. ಗೌಸಿಯಾ ಆಸ್ಪತ್ರೆ ಉದ್ಯಾನವನ
೧೩) ಲೇಡಿ ಕರ್ಜನ್ ಮತ್ತು ಬೋರಿಂಗ್ ಆಸ್ಪತ್ರೆ ಉದ್ಯಾನವನ
೧೪) ಟಿ. ಬಿ. ಸ್ಯಾನಿಟೋರಿಯಂ ಆಸ್ಪತ್ರೆ ಉದ್ಯಾನವನ
೧೫) ಟಿ ಬಿ. ಸ್ಯಾನಿಟೋರಿಯಂ ಆಸ್ಪತ್ರೆ ಉದ್ಯಾನವನ ಹಳೇ ಮದ್ರಾಸ್ ರಸ್ತೆ
೧೬) ಮಿಂಟೋ ಆಸ್ಪತ್ರೆ ಉದ್ಯಾನವನ
೧೭) ಸಾಂಕ್ರಾಮಿಕ ರೋಗಗಳ ಆಸ್ಪತ್ರೆ ಉದ್ಯಾನವನ
೧೮) ವೈದ್ಯಕೀಯ ಆಸ್ಪತ್ರೆ ಉದ್ಯಾನವನ
೧೯) ಲೆಪ್ರಸಿ ಆಸ್ಪತ್ರೆ ಉದ್ಯಾನವನ
೨೦) ಈ ಸಿ. ಜನರಲ್ ಆಸ್ಪತ್ರೆ ಉದ್ಯಾನವನ

ಬೆಂಗಳೂರು ಜಿಲ್ಲೆ

೨೧) ದೊಡ್ಡ ಆಲದ ಮರ ಉದ್ಯಾನವನ
೨೨) ಕಣ್ವವನ ಚನ್ನಪಟ್ಟಣ ತಾಲೂಕು

ಕೋಲಾರ ಜಿಲ್ಲೆ

೨೩) ಸರ್. ಎಂ. ವಿಶ್ವೇಶ್ವರಯ್ಯ ಉದ್ಯಾನವನ ಮುದ್ದೇನಹಳ್ಳಿ

ಕೊಡಗು ಜಿಲ್ಲೆ

೨೪) ರಾಜಾಸೀಟ್ ಉದ್ಯಾನವನ, ಮಡಿಕೇರಿ
೨೫) ಕೋಹಿನೂರ್ ಉದ್ಯಾನವನ, ಮಡಿಕೇರಿ
೨೬) ಸುದರ್ಶನ ಉದ್ಯಾನವನ, ಮಡಿಕೇರಿ

ಹಾಸನ ಜಿಲ್ಲೆ

೨೭) ಜಿಲ್ಲಾಧಿಕಾರಿಗಳ ಕಚೇರಿ ಉದ್ಯಾನವನ, ಹಾಸನ

ದಕ್ಷಿಣ ಕನ್ನಡ ಜಿಲ್ಲೆ

೨೮) ಕದರಿ ಉದ್ಯಾನವನ ಮಂಗಳೂರು

ಮಂಡ್ಯ ಜಿಲ್ಲೆ

೨೯) ಪಶ್ಚಿಮ ವಾಹಿನಿ ಉದ್ಯಾನವನ, ಶ್ರೀರಂಗ ಪಟ್ಟಣ
೩೦) ಬೃಂದಾವನ ಉದ್ಯಾನವನ ಕೆ. ಆರ್. ಎಸ್.
೩೧) ಭವ್ಯವನ (ಜಿಲ್ಲಾಧಿಕಾರಿಗಳ ಕಚೇರಿ ಆವರಣ), ಮಂಡ್ಯ
೩೨) ಶಿವಪುರ, ಮಂಡ್ಯ ಜಿಲ್ಲೆ

ಮೈಸೂರು ಜಿಲ್ಲೆ

೩೩) ಕರ್ಜನ್ ಪಾರ್ಕ – ೧ನೇ ವಿಭಾಗ
೩೪) ಕರ್ಜನ್ ಪಾರ್ಕ – ೨ನೇ ವಿಭಾಗ
೩೫) ಕರ್ಜನ್ ಪಾರ್ಕ – ೩ನೇ ವಿಭಾಗ
೩೬) ಆಸ್ಪತ್ರೆ ಉದ್ಯಾನವನಗಳು
೩೭) ಸರಕಾರಿ ಅತಿಥಿಗೃಹ ಉದ್ಯಾನವನ
೩೮) ಪೋಲೀಸ್ ಅಧೀಕ್ಷಕರ ಕಚೇರಿ ಉದ್ಯಾನವನ
೩೯) ಬಾಡಿಗಾರ್ಡ ಉದ್ಯಾನವನ
೪೦) ಲಲಿತ ಮಹಲ್ ಉದ್ಯಾನವನ
೪೧) ನಿಘಾಜ್ ಬಾಗ್ ಉದ್ಯಾನವನ
೪೨) ಹಾರ್ಡಿಂಜ್ ವೃತ್ತ ಉದ್ಯಾನವನ
೪೩) ಸೆಂಟ್ರಲ್ ನರ್ಸರಿ ಉದ್ಯಾನವನ
೪೪) ಡಿ. ಸಿ. ಕಚೇರಿ ಉದ್ಯಾನವನ
೪೫) ಚಾಮುಂಡಿ ವಸತಿಗೃಹ ಉದ್ಯಾನವನ
೪೬) ಜಲದರ್ಶಿನಿ ಉದ್ಯಾನವನ
೪೭) ಜಿಲ್ಲಾಧಿಕಾರಿಗಳ ವಸತಿಗೃಹ ಉದ್ಯಾನವನ
೪೮) ವಿಭಾಗಾಧಿಕಾರಿಯವರ ಕಚೇರಿ ಉದ್ಯಾನವನ
೪೯) ವಿ. ಕೆ. ಸ್ಯಾನಿಟೋರಿಯಂ ಉದ್ಯಾನವನ
೫೦) ಗಾರ್ಡನ್ ಪಾರ್ಕ ನರ್ಸರಿ

ಧಾರವಾಡ ಜಿಲ್ಲೆ

೫೧) ಶ್ರೀ ವೀರನಾರಾಯಣ ವನ, ಗದಗ
೫೨) ಕೆ. ಎಸ್. ಸಿ. ಆಸ್ಪತ್ರೆ ಉದ್ಯಾನವನ, ಹುಬ್ಬಳ್ಳಿ

ಬೆಳಗಾಂವ ಜಿಲ್ಲೆ

೫೩) ಹುಳ್ಕೆ ಉದ್ಯಾನವನ, ಬೆಳಗಾಂ

ಬಿಜಾಪೂರ ಜಿಲ್ಲೆ

೫೪) ಡಾ. ಅಂಬೇಡ್ಕರ್ ಉದ್ಯಾನವನ

ಗುಲ್ಬರ್ಗ ಜಿಲ್ಲೆ

೫೫) ಐವಾನ್-ಇ-ಷಾಹಿ ಉದ್ಯಾನವನ, ಗುಲ್ಬರ್ಗಾ

ರಾಯಚೂರು ಜಿಲ್ಲೆ

೫೬) ಪಂಪವನ ಮುನಿರಾಬಾದ್

೫೭) ಕೈಲಾಸ ಉದ್ಯಾನವನ ಮುನಿರಾಬಾದ್

೫೮) ಅರ್ಥನ್ ಡ್ಯಾಂ ಉದ್ಯಾನವನ ಮುನಿರಾಬಾದ

೫೯) ಮೆಮೋರಿಯಲ್ ಉದ್ಯಾನವನ, ಮುನಿರಾಬಾದ

ಬೀದರ್ ಜಿಲ್ಲೆ

೬೦) ಬಸವವನ ಬಸವಕಲ್ಯಾಣ ತಾಲ್ಲೂಕು

ವಿಷಯ : ಕುಡಿಯುವ ನೀರಿನ ಯೋಜನೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೪೦೦ (೪೪೩)

ಶ್ರೀ ವಾಟಾಳ ನಾಗರಾಜ (ಚಾಮರಾಜನಗರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಹಾಗೂ ವಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕುಡಿಯುವ ನೀರಿನ ಯೋಜನೆ ಪ್ರಕಾರ ಗ್ರಾಮಗಳಲ್ಲಿ ತೋಡಿರುವ ಸಾವಿರಾರು ಕೊಳವೆ ಬಾವಿಗಳು ಬತ್ತಿರುವದರಿಂದ ಅದಕ್ಕೆ ಪರ್ಯಾಯವಾಗಿ ಬತ್ತಿ ಹೋಗಿರುವ ಕಡೆ ಕೊಳವೆ ಬಾವಿಗಳನ್ನು ತ್ವರಿತವಾಗಿ ತೋಡಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆಯೇ ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಪ್ರತಿ ವರ್ಷ ಜಿಲ್ಲಾ ಪರಿಷತ್‌ಗಳು ತಮ್ಮ ಕ್ರಿಯಾ ಯೋಜನೆಗಳಡಿಯಲ್ಲಿ ಮತ್ತು ಸಂಪನ್ಮೂಲಗಳನ್ನೊಳಗೊಂಡು ಬೇಕಾದ ಮಟ್ಟಕ್ಕೆ ನೀರು ಪೂರೈಸಲು ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ. ಮತ್ತು ತುರ್ತು ಪರಿಸ್ಥಿತಿಯಲ್ಲಿ ಅಭಾವ ಪರಿಹಾರ ಮತ್ತು ಇತರೆ ಯೋಜನೆಗಳಡಿಯಲ್ಲೂ ಕೆಲಸಗಳನ್ನು ಕಾರ್ಯಗತಗೊಳಿಸಲಾಗುತ್ತದೆ.